**ಸಾಕ್ಷಿಗೆ ದಿನಾಂಕಃ10-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ನನ್ನ ಸ್ವತ್ತನ್ನು ನಾನು 2012 ರಲ್ಲಿ ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆ ಸಮಯದಲ್ಲಿ ನಾನು ಯಾವುದೇ ಬಾಜುದಾರರಿಗೆ ನೋಟೀಸ್ ಕೊಡಿಸಿರುವುದಿಲ್ಲ, ಕಾರಣ ಅದನ್ನು ವೈಯಕ್ತಿಕವಾಗಿ ಮಾಡಿಸಿರುತ್ತೇನೆ. ಸದರಿ ಅಳತೆ ಅನ್ವಯ ನನ್ನ ಜಮೀನು ಹೆದ್ದಾರಿಯ ಮಾರ್ಜಿನ್ ನಿಂದ ಸರ್ವೇ ನಂಬರ್ 75 ಮತ್ತು 76 ರವರಗೂ ಇರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ. ನನ್ನ ಸ್ವತ್ತಿನ ಪೂರ್ವಕ್ಕೆ ಲೇ ಔಟ್ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹೆದ್ದಾರಿಯ ಮಾರ್ಜಿನ್ ಮತ್ತು ದಕ್ಷಿಣಕ್ಕೆ ಸರ್ವೇ ನಂಬರ್ 75 ಮತ್ತು 76 ರ ಜಾಗ ಬರುತ್ತದೆ. ನನ್ನ 5 ಗುಂಟೆ ಜಾಗದಲ್ಲಿ ನಾನು ಮಾತ್ರ ಸ್ವಾಧೀನದಲ್ಲಿ ಇರುತ್ತೇನೆ. ನನ್ನ 5 ಗುಂಟೆ ಜಾಗದ ದಕ್ಷಿಣಕ್ಕೆ ಲಲಿತಮ್ಮ ಮತ್ತು ಈಶ್ವರಪ್ಪ, ವಿನಯಟ್ ವಿಲೀಯಂ ಮತ್ತು ಅರವಿಂದ್ textiles ರವರ ನಿವೇಶನಗಳು ಇರುತ್ತವೆ ಎಂದರೆ ಸರಿ. ಸದರಿ ವ್ಯಕ್ತಿಗಳ ನಿವೇಶನ ಪಕ್ಕದಲ್ಲಿ ಲೇಔಟ್ ಗೆ ಹೋಗುವ ಒಂದು ರಸ್ತೆ ಪೂರ್ವದಲ್ಲಿ ಇರುತ್ತದೆ. ಸದರಿ ವ್ಯಕ್ತಿಗಳ ನಿವೇಶನಗಳ ಪಕ್ಕದಲ್ಲಿ ಟಿ ಎಂ ಸಿ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ 2 ರಸ್ತೆಗಳು ನನ್ನ ಜಮೀನಿಗೆ ಲಗತ್ತಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಲಲಿತಮ್ಮ ಮತ್ತು ಈಶ್ವರಪ್ಪ ರವರನ್ನು ಹೊರತುಪಡಿಸಿ ಮೇಲೆ ಹೇಳಿದ ಬೇರೆ ವ್ಯಕ್ತಿಗಳ ಮೇಲೆ ನಾನು ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ26 ಎಂದು ಗುರುತಿಸಲಾಯಿತು. ಸದರಿ ರಸ್ತೆಯು ಮೇಲೆ ಹೇಳಿದ ವ್ಯಕ್ತಿಗಳ ನಿವೇಶನಗಳ ಪೂರ್ವಕ್ಕೆ ಇರುತ್ತದೆ ಎಂದರೆ ಸರಿ.

ಸಾಕ್ಷಿಗೆ ಮತ್ತೊಂದು ಪೋಟೋವನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ27 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ಕಂಡು ಬರುವ ಗ್ಯಾರೇಜ್ ಅನ್ನು ಲಲಿತಮ್ಮ ಮತ್ತು ಈಶ್ವರಪ್ಪ ರವರು ಗ್ಯಾರೇಜ್ ನಡೆಸಲು ಅವರ ಜಾಗದಲ್ಲಿ ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸರಿ. ಹಿಂದೆ ನನ್ನ 5 ಗುಂಟೆ ಜಾಗವನ್ನು

ಅನ್ಯಕ್ರಾಂತ ಮಾಡಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಆ ರೀತಿ ಅರ್ಜಿಯನ್ನು ಯಾವ ಸಾಲಿನಲ್ಲಿ ಸಲ್ಲಿಸಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಅನ್ಯಕ್ರಾಂತ ಅರ್ಜಿಯು ಇನ್ನು ಪರಿಗಣೆನೆಗೆ ಬಾಕಿ ಇರುತ್ತದೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಒಪ್ಪಿದ ಕಾರಣ ಅದನ್ನು ನಿಪಿ28 ಎಂದು ಗುರುತಿಸಲಾಯಿತು. ನಿಪಿ28 ರಲ್ಲಿ ನನಗೆ ಸಂಬಂಧಪಟ್ಟ ಇಲಾಖೆಯಿಂದ ಅನ್ಯಕ್ರಾಂತಕ್ಕೆ ಅನುಮತಿಯನ್ನು ತಿರಸ್ಕರಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ28 ರ ನಂತರದಲ್ಲಿ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಜಾಗದ ಪೈಕಿ ಸ್ವಲ್ಪ ಜಾಗ national highway ಗೆ ಹೋಗಿ ಈಗ 5 ಗುಂಟೆ ಉಳಿದಿರುತ್ತದೆ ಎಂದರೆ ಸರಿ. national highway ಯ ಮಧ್ಯದಿಂದ 70 ಅಡಿಗಳಷ್ಟು ಜಾಗದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಲು ಬರುವುದಿಲ್ಲ ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ನಿಯಮದ ಅನುಸಾರ ಈಶ್ವರಪ್ಪ ರವರ ಜಾಗದ ಅರ್ಧ ಭಾಗದಿಂದ ಯಾವುದೇ ಕಟ್ಟಡ ನಿರ್ಮಾಣ ಮಾಡಲು ಬರುವುದಿಲ್ಲ ಎಂದರೆ ಇರಬುದು. ಅದೇ ಕಾರಣಕ್ಕೆ ನಾನು ಸಲ್ಲಿಸಿದ ಅನ್ಯಕ್ರಾಂತ ಅರ್ಜಿ ಸಹ ಡಿಸಿ ರವರು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ29 ಎಂದು ಗುರುತಿಸಲಾಯಿತು. ನಿಪಿ29 ರ ಪ್ರಕಾರ ಮೇಲೆ ಹೇಳಿದ ಕಾರಣಕ್ಕೆ ಡಿಸಿ ರವರು ಅನ್ಯಕ್ರಾಂತವನ್ನು ವಜಾ ಮಾಡಿರುತ್ತಾರೆ ಎಂದರೆ ಇರಬಹುದು. ನಿಪಿ29 ರ ವಿರುದ್ದ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನಗೆ ವಾಸ್ತವದಲ್ಲಿ ಯಾವುದೇ ಜಾಗ ಉಳಿಯದ ಕಾರಣ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಅದೇ ಕಾರಣಕ್ಕೆ ನಾನು ಈಶ್ವರಪ್ಪ ಮತ್ತು ಲಲಿತಮ್ಮ ರವರ ಜಾಗವನ್ನು ನನ್ನ ಜಾಗ ಎಂದು ಹೇಳಿಕೊಂಡು ತೊಂದರೆ ಕೊಟ್ಟು ಅವರ ಜಾಗವನ್ನು ಕಬಳಿಸಲು ಪ್ರಯತ್ನಿ ಪಡುತ್ತಿದ್ದೇನೆ ಎಂದರೆ ಸರಿಯಲ್ಲ. Highway margin ಒಳಗೆ ನನ್ನ ಜಾಗ ಸೇರಿರುವ ಕಾರಣ ಸುಳ್ಳು ಕತೆ ಕಟ್ಟಿ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: